# ನಮಿಸುವೆ ಸಾಲು ಮರದ ತಿಮ್ಮಕ್ಕಗೆ

**ಜೇನಹಳ್ಳಿ ಸಿದ್ಧಲಿಂಗಪ್ಪ**

ಕಲೆ: ಸಂತೋಷ್ ಸಸಿಹಿತ್ಲು

ಗಿಡಗಳ ಲಾಲನೆ ಪಾಲನೆ ಮಾಡುತ
ಮರಗಳನಾಗಿಸಿ ಬೆಳೆಸಿರುವ
ಬಂಜೆಯ ಶಬ್ದವನಾಚೆಗೆ ತಳ್ಳುತ
ಮರಗಳೆ ಮಗುವೆಂದೆನುತಿರುವ
ಹಸಿರನು ಉಳಿಸುತ ಜೀವವ ತುಂಬುತ
ನೆರಳಿನ ಆಶ್ರಯ ನೀಡಿರುವ
ಹಗಲಿರುಳೆನ್ನದೆ ದಣಿಯದೆ ಬಾಡದೆ
ಹನಿ ಹನಿ ನೀರನು ಕುಡಿಸಿರುವ
ರಸ್ತೆಯ ಉದ್ದಕು ಸ್ವಾಗತ ಕೋರಲು
ಕರೆಯುವ ಕೈಗಳ ಹಿಡಿದಿರುವ
ಹಕ್ಕಿಗೆ ಪ್ರಾಣಿಗೆ ಮನುಜಗೆ ಎಲ್ಲಕು
ಉಸಿರಾಡಲು ಗಾಳಿ ಬೇಕೆನುವ
ಗಿಡವನೆ ತಬ್ಬುತ ಮರವನೆ ಅಪ್ಪುತ
ಬುಡದೊಳು ನಮಿಸಿ ಬೆಳೆಸಿರುವ
ನೂರ್ಕಾಲ ಬಾಳಿ ಆರೋಗ್ಯವಾಗಿರು
ಎನ್ನುವ ಹರಕೆಯ ತೀರಿಸಿ
ನಾಡೋಜ ಪದ್ಮಶ್ರೀ ರಾಜ್ಯೋತ್ಸವ
ಪ್ರಶಸ್ತಿಗೆ ಭಾಜನರಾಗಿರುವ
ಸಾಲುಮರದ ತಿಮ್ಮಕ್ಕನೆ ನಿನಗೆ
ನಮಿಸುವೆ ಸ್ಮರಿಸುವೆ ದಿನನಿತ್ಯವೂ



## ಕುಂಚ ಪ್ರಪಂಚ





**ಅಫಿಯಾ ಖಾನಂ**
6ನೇ ತರಗತಿ, ನಿವೇದಿತಾ ಇಂಗ್ಲಿಷ್ ಮೀಡಿಯಂ ಸ್ಕೂಲ್, ಕೊಪ್ಪಳ

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.

**ವಿಳಾಸ: editorsu@sudha.co.in**



**ಸಾನ್ವಿ ಬರ್ಕರ್**
4ನೇ ತರಗತಿ, ಇಂಡಿಯನ್ ಇಂಟರ್ ನ್ಯಾಷನಲ್ ಸ್ಕೂಲ್, ಚಿತ್ರದುರ್ಗ

